RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ



| | | |
|---|---|---|
| ಭಾಗ-IVA | ಬೆಂಗಳೂರು, ಶುಕ್ರವಾರ, ಜನವರಿ ೧೩, ೨೦೧೭ (ಪುಷ್ಯ ೨೩, ಶಕ ವರ್ಷ ೧೯೩೮) | ನಂ. ೫೬ |
| Part-IVA | Bengaluru, Friday, January 13, 2017 (Pushya 23, Shaka Varsha 1938) | No. 56 |



**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಗ್ರಾಅಪ 479 ಗ್ರಾಪಂಅ 2016, ಬೆಂಗಳೂರು, ದಿನಾಂಕ: 13-01-2017.**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 310 ರೊಡನೆ ಓದಿಕೊಂಡಂತೆ ಪ್ರಕರಣ 311 ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿಯ ಚೇರ್ಮನನ್ನು ಆಯ್ಕೆ ಮಾಡುವ ವಿಧಾನ) ನಿಯಮಗಳು, 2016 ರ ನಿಯಮಗಳ ಕರಡನ್ನು ದಿನಾಂಕ:24-08-2016 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ-IV-A ರಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡು ನಿಯಮಗಳಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರಿ ಕರ್ನಾಟಕ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:24-08-2016ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಲ್ಲಿ ಸ್ವೀಕೃತವಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರವು ಪರಿಗಣಿಸಿರುವುದರಿಂದ;

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 311ನೇ ಪ್ರಕರಣದೊಂದಿಗೆ ಓದಲಾದಂತೆ, ಸದರಿ ಅಧಿನಿಯಮದ ಪ್ರಕರಣ 310 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ;-

**ನಿಯಮಗಳು**

**1. ಹೆಸರು ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿಯ ಚೇರ್ಮನನ್ನು ಆಯ್ಕೆ ಮಾಡುವ ವಿಧಾನ) ನಿಯಮಗಳು 2017 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:-**ಈ ನಿಯಮಗಳಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ:-

(ಅ)**"ಅಧಿನಿಯಮ"** ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14);

(ಬ) **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ.

**3. ಜಿಲ್ಲಾ ಯೋಜನಾ ಸಮಿತಿಯ ಚೇರ್ಮನನ್ನು ಆಯ್ಕೆ ಮಾಡುವ ವಿಧಾನ:– (1)** ಜಿಲ್ಲಾ ಯೋಜನಾ ಸಮಿತಿಯ ಚೇರ್ಮನನ್ನು ಜಿಲ್ಲಾ ಯೋಜನಾ ಸಮಿತಿಯ ಸಭೆಯಲ್ಲಿ, ಸಂಬಂಧಪಟ್ಟ ಜಿಲ್ಲೆಯ ಉಸ್ತುವಾರಿ ಸಚಿವರು ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಲ್ಲಿ ಒಬ್ಬರನ್ನು ಮಾತ್ರ ಆಯ್ಕೆ ಮಾಡತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಜಿಲ್ಲಾ ಯೋಜನಾ ಸಮಿತಿಯು ರಚನೆಯಾದ ಒಂದು ತಿಂಗಳಲ್ಲಿ ಚೇರ್ಮನನ ಆಯ್ಕೆಗಾಗಿ ಮೊದಲ ಸಭೆಯ ದಿನಾಂಕವನ್ನು ನಿಗಧಿಪಡಿಸತಕ್ಕದ್ದು. ಚೇರ್ಮನನ ಆಯ್ಕೆ ಮಾತ್ರ ಈ ಸಭೆಯ ಕಾರ್ಯಸೂಚಿಯಾಗಿರತಕ್ಕದ್ದು.

(2) ಹಾಜರಿದ್ದ ಅತ್ಯಂತ ಹಿರಿಯ ಸದಸ್ಯ ಒಬ್ಬರನ್ನು ಸಭೆಯ ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡತಕ್ಕದ್ದು.

(3) ಮೊದಲ ಸಭೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲೇ ಸಂಬಂಧಪಟ್ಟ ಜಿಲ್ಲೆಯ ಉಸ್ತುವಾರಿ ಸಚಿವರು ಅಥವಾ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಸ್ವತಹಃ ಅಥವಾ ತನ್ನ ಹೆಸರು ಸೂಚಿಸುವವರ ಮೂಲಕ ಕೆಳಕಂಡ ನಮೂನೆಯಲ್ಲಿ ಭರ್ತಿ ಮಾಡಿದ ಮತ್ತು ಸಹಿ ಮಾಡಿದ ಪತ್ರವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ನೀಡತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಪತ್ರವನ್ನು ಸ್ವೀಕರಿಸಿದ ಮೇಲೆ ಅದರ ಕ್ರಮ ಸಂಖ್ಯೆ ಪತ್ರವನ್ನು ತಮಗೆ ನೀಡಿದ ದಿನಾಂಕ ಮತ್ತು ವೇಳೆಯನ್ನು ನಮೂದಿಸಬೇಕು ಮತ್ತು ಪತ್ರದಲ್ಲಿ ಹೆಸರನ್ನು ಮತ್ತು ಸಂಖ್ಯೆಯನ್ನು ಪರಿಶೀಲನೆ ಮಾಡತಕ್ಕದ್ದು. ಗೊತ್ತುಪಡಿಸಲಾದ ದಿನಾಂಕ ಮತ್ತು ಕಾಲದ ತರುವಾಯ ಸ್ವೀಕರಿಸಿದ ಪತ್ರಗಳನ್ನು ತಿರಸ್ಕರಿಸತಕ್ಕದ್ದು. ಒಂದು ವೇಳೆ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಇದ್ದಲ್ಲಿ ಮಾತ್ರ ಚುನಾವಣೆ ನಡೆಸತಕ್ಕದ್ದು.

(4) ಮೊದಲ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಪತ್ರವನ್ನು ನೀಡಿದವರ ಹೆಸರು ಮತ್ತು ಸೂಚಕರ ಹೆಸರನ್ನು ಮತ್ತು ಸ್ವೀಕರಿಸಿದ ದಿನಾಂಕ ಮತ್ತು ವೇಳೆಯನ್ನು ಸದಸ್ಯರ ಗಮನಕ್ಕೆ ತರಲು ಓದಿ ಹೇಳತಕ್ಕದ್ದು. ಮತ್ತು ಸದಸ್ಯರಿಗೆ ತಮ್ಮ ಮತವನ್ನು ಕೈ ಎತ್ತುವ ಮೂಲಕ ಸೂಚಿಸಲು ಕೋರತಕ್ಕದ್ದು. ಸದಸ್ಯರಿಗೆ ಬಂದ ಪರವಾದ, ವಿರುದ್ಧವಾದ ಮತ್ತು ತಟಸ್ಥರಾದ ಸದಸ್ಯರ ಮತಗಳನ್ನು ದಾಖಲಿಸತಕ್ಕದ್ದು.

(5) ಅತಿ ಹೆಚ್ಚಿನ ಮತಗಳನ್ನು ಪಡೆದವರ ಹೆಸರನ್ನು ಜಿಲ್ಲಾ ಯೋಜನಾ ಸಮಿತಿಯ ಚೇರ್ಮನನ್ನಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಘೋಷಿಸತಕ್ಕದ್ದು. ಅದರಂತೆ ನಡವಳಿಗಳನ್ನು ದಾಖಲಿಸಿ ಸಭೆಯ ಅಧ್ಯಕ್ಷತೆ ವಹಿಸಿದವರಿಂದ ಸಹಿ ಪಡೆಯತಕ್ಕದ್ದು.

(6) ಒಂದು ವೇಳೆ ಸಮಾನ ಮತಗಳು ಬಂದ ಸಂದರ್ಭದಲ್ಲಿ ಲಾಟರಿ ಮೂಲಕ ಆಯ್ಕೆಯನ್ನು ತೀರ್ಮಾನಿಸತಕ್ಕದ್ದು ಮತ್ತು ಯಾರ ಹೆಸರಿಗೆ ಲಾಟರಿ ಬರುವುದೋ ಆ ಅಭ್ಯರ್ಥಿಯ ಹೆಸರನ್ನು ಆಯ್ಕೆಯಾಗಿರುತ್ತಾರೆಂದು ಘೋಷಿಸತಕ್ಕದ್ದು. ಅದರಂತೆ ನಡವಳಿಗಳನ್ನು ದಾಖಲಿಸಿ ಸಭೆಯ ಅಧ್ಯಕ್ಷತೆ ವಹಿಸಿದವರಿಂದ ಸಹಿ ಪಡೆಯತಕ್ಕದ್ದು.

**"ನಮೂನೆ**

**(ನಿಯಮ 3(3) ನೋಡಿ)**

1. ಸದಸ್ಯರ ಪೂರ್ಣ ಹೆಸರು:
2. ತಂದೆ/ಪತಿಯ ಹೆಸರು:
3. ವಯಸ್ಸು:
4. ಲಿಂಗ:
5. ವಿಳಾಸ:
6. ಸದಸ್ಯರ ಹೆಸರನ್ನು ಸೂಚಿಸುವವರ ಪೂರ್ತಿ ಹೆಸರು ಮತ್ತು ವಿಳಾಸ:

**ಸದಸ್ಯರ ಸಹಿ...** **ಸೂಚಿಸುವವರ ಸಹಿ"**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ವಿ. ಅರುಣ್‌ಕುಮಾರ್**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.